# ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

ರಿಜಿಸ್ಟರ್ಡ್ ನಂ. ಕೆಆರ್ಎನ್ಎಸ್ — ೧೯

ಸಂಪುಟ ೧ ಸಂಚಿಕೆ ೪೮ ಕೊಪ್ಪ ೩೧-೭-೮೯ · ಭಾನುವಾರ ಬೆಲೆ ೨೦ ಪೈಸೆ


## ಪೋಲೀಸ್ ಜೀಪು ಡಿಕ್ಕಿ ಹೊ...ಡೆದ ಬಾಲಕ ಗುಣಮುಖ

ಕೊಪ್ಪ: ಇಲ್ಲಿ ಜು. ೨೭ರಂದು ಪೋಲೀಸ್ ಜೀಪಿನಿಂದ ಅಪಘಾತಕ್ಕೀಡಾಗಿ... ಇಲ್ಲಿನ ಓಂದುಳಿದ ವರ್ಗ... ...ವಿದ್ಯಾರ್ಥಿ ಹರೀಶ ಹೆಗ್ಗಾರುಕುಡಿಗೆಯ ತನ್ನ ಮನೆಯಲ್ಲಿ ಈಗ ಗುಣಮುಖನಾಗುತ್ತಿದ್ದಾನೆಂದು ತಿಳಿದು ಬಂದಿದೆ.

ಇಲ್ಲಿನ ಸರ್ಕಾರಿ ವೈದ್ಯರು ಇರದಿದ್ದ ಕಾರಣ ಪೋಲೀಸರು ಹರೀಶನನ್ನು ಶೃಂಗೇರಿಗೆ ಕರೆದೊಯ್ದು, ಧನ್ವಂತರಿ ಆಸ್ಪತ್ರೆಯಲ್ಲಿ ಎಕ್ಸ್‌ರೇ ತೆಗಿಸಿ, ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ ಅವನ ಮನೆಗೆ ತಲುಪಿಸಿದ್ದರು.

ಜು. ೨೮ ರಂದು ಆತನ ತಂದೆಯ ಕೋರಿಕೆಯಂತೆ ಪುನಃ ವೈದ್ಯರಿಗೆ ತೋರಿಸಿ, ಗುಣಮುಖನಾಗುತ್ತಿರುವುದನ್ನು ಖಚಿತಪಡಿಸಿಕೊಳ್ಳಲಾಯಿತೆಂದು ಗೊತ್ತಾಗಿದೆ.

ಅಪಘಾತದ ಸುದ್ದಿ ತಿಳಿದು ಶಾಸಕ ಗೋವಿಂದಗೌಡರು ಶೃಂಗೇರಿಯಲ್ಲಿ ಹುಡುಗನನ್ನು ಕಂಡು ಚಿಕಿತ್ಸೆಯ ಬಗ್ಗೆ ವಿಚಾರಿಸಿದರೆಂದೂ ತಿಳಿದುಬಂದಿದೆ.

## ಶಾಲಾ ಮೈದಾನದಲ್ಲಿ ಇಟ್ಟಿಗೆ ಗೂಡು, ಹೊಂಡ!

(ವರದಿ: ಬಿ. ಬಿ. ಗೋಪಾಲಕೃಷ್ಣ)

**ಬೊಮ್ಲಾಪುರ: ಇಲ್ಲಿನ ಕಿರಿಯ ಪ್ರಾಥಮಿಕ ಶಾಲೆಗೆ ಕಳೆದ ವರ್ಷ ನಿರ್ಮಿಸಿದ್ದ ಆಟದ ಮೈದಾನದಲ್ಲಿ ಕಂಟ್ರಾಕ್ಟರರೊಬ್ಬರು ಸುಮಾರು ೩೫ ಅಡಿ ಸುತ್ತಳತೆ ಹಾಗೂ ೫-೬ ಅಡಿ ಆಳದ ಗುಂಡಿ ತೋಡಿ ಇಟ್ಟಿಗೆ ಬಿಟ್ಟಿದ್ದು ಅದೇ ಮೈದಾನದಲ್ಲೇ ಸುಟ್ಟಿದ್ದಾರೆ**

ಈ ಕೆಲಸ ಮಾಡಿರುವ ಎಂ. ಕೆ. ರತ್ನಾಕರ್ ಅವರೇ ಈ ಶಾಲೆ ಮತ್ತು ಮೈದಾನವನ್ನು ಗಿರಿಜನ ಯೋಜನೆಯು ೧೯೮೭ರಲ್ಲಿ ನಿರ್ಮಿಸಿದ್ದು, ಈಗಾಗಲೇ ನಾಟಗಳೆಲ್ಲ ಕುಂಬಾಗಿ ಶಾಲೆ ದುಸ್ಥಿತಿಗೆ ಈಡಾಗಿದೆ.

ಈ ವರ್ಷ ರಾ. ಗ್ರಾ. ಉ. ಯೋಜನೆಯಲ್ಲಿ ಶಾಲೆಗೆ ಜೋಡಿಸಿರುವ ಇನ್ನೊಂದು ಕೊಠಡಿಯನ್ನೂ ಇವರೇ ಕಟ್ಟಿಸಿದ್ದು, ಬಾಗಿಲು-ಕಿಟಕಿಗಳ ಮೇಲೆ ಚಪ್ಪಡಿ ಇಡದೆ ಗೋಡೆ ಕಟ್ಟಿದ್ದಾರೆ. ಕೇಳಿದವರಿಗೆ, "ಚಪ್ಪಡಿಗೆಲ್ಲ ಸರ್ಕಾರ ಹಣ ಕೊಡುವುದಿಲ್ಲ. ಈ ಕಂಟ್ರಾಕ್ಟ್ನೇ ನಷ್ಟದ್ದು" ಎನ್ನುತ್ತಾರೆ.

ಇಂಥ ಕಳಪೆ ಕೆಲಸ ಮಾಡಿದ್ದರೂ ಶಾಲೆಯ ಇತರ ಕಂಟ್ರಾಕ್ಟ್ ಕೆಲಸಗಳನ್ನು ಪುನಃ ಇವರಿಗೇ ವಹಿಸಲಾಗಿದೆ. ಈಗಾಗಲೇ ಕಟ್ಟಡಕ್ಕೆ ಪುನಃ ಸುಣ್ಣ-ಬಣ್ಣ ಹಾಗೂ ರಿಪೇರಿಗೆ ಸಹ ಕಂಟ್ರಾಕ್ಟ್ ಕೊಡಲಾಗಿದೆ.

ಈ ಎಲ್ಲ ವಿಷಯಗಳ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಗ್ರಾಮಸ್ಥರಿಗೆ ಉತ್ತರ ಕೊಡಬೇಕಾಗಿದೆ.

## ಉದ್ಯೋಗ ವಾರ್ತೆ

(ಸಂಗ್ರಹ: ಸು. ನಾ. ಶರ್ಮ)

ಕರ್ನಾಟಕ ಪಬ್ಲಿಕ್ ಸರ್ವಿಸ್ ಕಮಿಶನ್ ನಿಂದ ೪೯೦-೯೫೦ ರೂ. ವೇತನ ಶ್ರೇಣಿಯಲ್ಲಿ ಕಿರಿಯ ಸಹಾಯಕರು/ ಎರಡನೇ ದರ್ಜೆ ಗುಮಾಸ್ತರ ಹುದ್ದೆಗಳಿಗೆ ೧೯೮೪ನೇ ಜನವರಿ/ ಫೆಬ್ರವರಿಯಲ್ಲಿ ನಡೆಯುವ ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಅರ್ಜಿ ಕರೆಯಲಾಗಿದೆ. ಹುದ್ದೆಗಳು ತಲಾ ೫೦ ಮತ್ತು ೯೦೦ ಇದ್ದು, ಅರ್ಜಿಸಲ್ಲಿಸಲು ಕಡೇ ದಿನ ೨೯-೯-೮೩. ಹೆಚ್ಚಿನ ವಿವರಗಳಿಗೆ ಜುಲೈ ೨೧ರ ರಾಜ್ಯ ಗೆಜೆಟ್‌ನ ೭ನೇ ಭಾಗ ನೋಡಿ.

## ಹುಲಿ ಹಾವಳಿ ತಪ್ಪಿಸಲು ಮಾಡಿದ ಮನವಿ ವಿಫಲ: ಚಳುವಳಿ ಬೆದರಿಕೆ

ನ. ರಾ. ಪುರ: ಕೊಪ್ಪ ಅರಣ್ಯವಿಭಾಗಕ್ಕೆ ಸೇರಿದ ಅರಣ್ಯಗಳ ಸಮೀಪದ ಗ್ರಾಮಗಳಲ್ಲಿ ಇತ್ತೀಚೆಗೆ ಹುಲಿ ಹಾವಳಿಗೆ ... ಕ್ಕೂ ಹೆಚ್ಚು ಜಾನುವಾರುಗಳು ... ಗಿವೆ; ಸರ್ಕಾರಕ್ಕೆ ಅನೇಕ ... ಸಲ್ಲಿಸಿದ್ದರೂ ಯಾವುದೇ ಕ್ರಮ ... ಡಿಲ್ಲ ಎಂದು ರಾಜ್ಯ ರೈತಸಂಘ ... ಮಕ್ಕಿ-ಕೊಳಲೆ-ಅಡುವಳ್ಳಿ-... ಬೆ ಆರೋಪಿಸಿದೆ.

ವನ್ಯ ಮೃಗಗಳನ್ನು ಅಭಯಾರಣ್ಯಕ್ಕೆ ಸಾಗಿಸಿ ರೈತರಿಗೆ ರಕ್ಷಣೆ ಒದ... ಚಳುವಳಿ ಹೂಡಬೇಕಾದೀತೆಂದು ... ಎಚ್ಚರಿಸಿದೆ.

## ದಿಕ್ಕಿಲ್ಲದ ಬಸ್ ನಿಲ್ದಾಣ?

ಅಡ್ಡಗದ್ದೆ: ಸಮೀಪದ ಶಾವ... ಲ್ದಾಣದಿಂದ ಕೇವಲ ೨೫ ಮಿ.ಮೀ. ದೂರದಲ್ಲಿ ಇನ್ನೊಂದು ಬಸ್ ನಿಲ್ದಾಣ ನಿ...ಗಿ ಮೂರ್ನಾಲ್ಕು ತಿಂಗಳಾಯಿತು, ... ಯಾವ ಊರಿನ ಹೆಸರನ್ನೂ ಇಟ್ಟಿ... ರಿಗೂ ಇದು ಉಪಯೋಗವೂ ಇ... ಓದುಗರೊಬ್ಬರು ಬರೆದಿದ್ದಾರೆ.

## ಕೃತಜ್ಞತೆ

ಕೊಪ್ಪ: ಇಲ್ಲಿನ ಸರ್ಕಾರಿ ಕಿ... ಕಾಲೇಜಿನಲ್ಲಿ ೧೯೬೭ರ ನವೆಂಬರಿನಿಂದ ಪ್ರಾಂಶುಪಾಲರಾಗಿದ್ದು ಇದೇ ಜುಲೈ ೩೧ ರಂದು ನಿವೃತ್ತರಾಗುತ್ತಿರುವ ಕೆ. ಎಸ್. ನಾರಾಯಣಸ್ವಾಮಿಯವರು, ತಮ್ಮ ಅಧಿಕಾರಾವಧಿಯಲ್ಲಿ ಇತ್ತ ಸಹಕಾರ ಮತ್ತು ತೋರಿದ ಅಭಿಮಾನಗಳಿಗಾಗಿ ಎಲ್ಲರನ್ನೂ ಕೃತಜ್ಞಪೂರ್ವಕವಾಗಿ ವಂದಿಸಿದ್ದಾರೆ.

---

'ಮುಂಜಾವು'

ಚಂದಾದರ: ವಾರ್ಷಿಕ ಚಂದಾ ೧೦ ರೂ.

---

ಅವರನ್ನು ಇನ್ನೂ ೨ ವರ್ಷ ಇಲ್ಲೇ ಉಳಿಸಬೇಕೆಂಬ ಸ್ಥಳೀಯರ ಮುಖಂಡರ ಕೋರಿಕೆ ಫಲ ನೀಡಿದೆ. ರೈ ಇಪ್ಪತ್ತೊಂದೇ ವರ್ಗವಾಗಿ ಹೋಗಲಿದ್ದಾರೆಂದು ತಿಳಿದು ಬಂದಿದೆ.

## ದೋಷಪೂರ್ಣ ವಿದ್ಯುಚ್ಛಕ್ತಿ ಕಾಮಗಾರಿ: ಪಂಚಾಯ್ತಿ ಅಧ್ಯಕ್ಷರ ಆಕ್ಷೇಪ

ಹಾಲ್ಮುತ್ತೂರು: ಇಲ್ಲಿಂದ ಹೊಸೂರಿಗೆ ಹೊಸದಾಗಿ ಎಳೆದಿರುವ ವಿದ್ಯುತ್ ತಂತಿ ಇಲ್ಲಿನ ದೇವರ ರಥ ಹೋಗುವ ದಾರಿಗೆ ಅಡ್ಡವಾಗಿ ಹಾದುಹೋಗಿದ್ದು, ೪೭ ಅಡಿಎತ್ತರದ ಪುರಾತನ ರಥದ ಉತ್ಸವಕ್ಕೆ ತೊಂದರೆಯಾಗುತ್ತದೆಂದು ದೇವಸ್ಥಾನದ ಸಂಚಾಲಕರಾಗಿರುವ ಪಂಚಾಯ್ತಿ ಅಧ್ಯಕ್ಷ ಸೀತಾರಾಮಭಟ್ ಆಕ್ಷೇಪಿಸಿದ್ದಾರೆ.

"ಈ ಕಾಮಗಾರಿ ಆರಂಭವಾಗುವುದಕ್ಕೆ ಮುಂಚೆ ವಿದ್ಯುಚ್ಛಕ್ತಿ ಇಲಾಖೆಯ ಸ್ಥಳೀಯ ಅಧಿಕಾರಿಗಳಿಗೂ ಎಕ್ಸಿಕ್ಯುಟಿವ್ ಇಂಜಿನಿಯರರಿಗೂ ತಂತಿ ಮಾರ್ಗವನ್ನು ಬದಲಿಸಲು ಮನವಿ ಮಾಡಿದ್ದೆ. ಸ್ಥಳೀಯ ಅಧಿಕಾರಿಗಳು ಸಮಸ್ಯೆ ಸಂಪಡಿಸುವ ಭರವಸೆ ಕೊಟ್ಟಿದ್ದರಾದರೂ ಅದರಂತೆ ನಡೆದಿಲ್ಲ" ಎಂದು ಅಧ್ಯಕ್ಷರು ತಿಳಿಸಿದ್ದಾರೆ.

"ಈ ಮಾರ್ಗಕ್ಕಾಗಿ ಒಂದೂವರೆ ಮೈಲಿ ದೂರ ಸುಮಾರು ೩೦ ಅಡಿ ಅಗಲಕ್ಕೆ ಒಳ್ಳೆಯ ಕಾಡು ಕಡಿದಿದ್ದಾರೆ. ಕಾಡು ಕಡಿಯದೆಯೇ, ಇನ್ನೂ ೨ ಹಳ್ಳಿಗಳ ಏಳೆಂಟು ಮನೆಗಳಿಗೆ ಹತ್ತಿರವಾಗಿ, ಒರೀ ಗದ್ದೆಯ ಮೂಲಕ ಹಾದುಹೋಗಬಹುದೆಂದು ಸೂಚಿಸಿದ್ದೆ. ನನ್ನ ಆಕ್ಷೇಪಣೆಗಳನ್ನಾಗಲಿ, ಮನವಿಯನ್ನಾಗಲಿ ಗಣನೆಗೆ ತೆಗೆದುಕೊಳ್ಳದೆ ಕೆಲಸ ಮಾಡಿಸಿದ್ದಾರೆ" ಎಂದೂ ಅವರು ಹೇಳಿದ್ದಾರೆ.

ಆರು ಅಡಿ ಹುಗಿಯಬೇಕಾದ ಕಂಬಗಳನ್ನು ಎರಡು-ಎರಡೂವರೆ ಅಡಿಯವರೆಗೆ ಮಾತ್ರ ಹುಗಿದಿದ್ದರಿಂದ ಕೆಲಸ ಮುಗಿದ ೨ ತಿಂಗಳೊಳಗೆ ಮೂರ್ನಾಲ್ಕು ಕಂಬಗಳು ಬಿದ್ದು ಹೋಗಿ ಮೊನ್ನೆಯಷ್ಟೇ ರಿಪೇರಿ ಮಾಡಿಸಿದ್ದಾರೆಂದೂ, ಈ ಕಾಮಗಾರಿ ಗ್ರಾಮಸ್ಥರ ತಲೆಯ ಮೇಲೆ ನಿರಂತರ ತೂಗುಕತ್ತಿಯಾಗಿದೆಯೆಂದೂ ಅವರು ತಿಳಿಸಿದ್ದಾರೆ.

[ಈ ಬಗ್ಗೆ ಇಲ್ಲಿನ ಕ.ವಿ.ಮಂ. ಸಹಾಯಕ ಇಂಜಿನಿಯರರ ಪ್ರತಿಕ್ರಿಯೆ ಕೇಳಿ ನಾವು ಬರೆದ ಪತ್ರವನ್ನು ಅವರು ಬಾಳೆಹೊನ್ನೂರಿನ ಮೇಲಧಿಕಾರಿಗೆ ರವಾನಿಸಿದ್ದು, ಅವರ ಉತ್ತರ ಕಾಯುತ್ತಿದ್ದೇವೆ. —ಸಂ.]

## ಕಳವು

ಬೊಮ್ಲಾಪುರ: ಇಲ್ಲಿನ ಯುವಕ ಸಂಘದ ಕಟ್ಟಡದಲ್ಲಿದ್ದ ಅಂಗನವಾಡಿಯಲ್ಲಿ ಜುಲೈ ೧೯ ರಂದು ಜಮುಖಾನ, ಆಹಾರ ಸಾಮಗ್ರಿ ಹಾಗೂ ಒಂದು ತಗಡಿನ ಡ್ರಂ ಕಳವಾಗಿವೆ. ಕೊಪ್ಪ ಪೋಲೀಸರು ಮಹಜರು ಮಾಡಿ ತನಿಖೆ ನಡೆಸುತ್ತಿದ್ದಾರೆ. ಕಳ್ಳರು ಇನ್ನೂ ಪತ್ತೆಯಾಗಿಲ್ಲ.

## ರಮಾನಂದ ರೈ ಪಣಂಬೂರಿಗೆ ವರ್ಗ

ಶೃಂಗೇರಿ: ಇಲ್ಲಿನ ಠಾಣಾಧಿಕಾರಿಯಾಗಿದ್ದ ರಮಾನಂದ ರೈ ಅವರಿಗೆ ಪಣಂಬೂರಿಗೆ ವರ್ಗವಾಗಿರುವುದಾಗಿ ವರದಿಯಾಗಿದೆ.

ಪುಂಡರ ಚಟುವಟಿಕೆಗೆ ಕಡಿವಾಣ ಹಾಕುವಲ್ಲಿ ರೈ ಎಲ್ಲರಿಗಿಂತ ಹೆಚ್ಚು ಯಶ ಗಳಿಸಿದ್ದರು. ಈ ಸಲದ ಹೋಳಿ ಹಬ್ಬದ ಮರುದಿನ ಶೃಂಗೇರಿಯಲ್ಲಿ ಒಬ್ಬರು ಹೇಳುತ್ತಿದ್ದರು— "ಈ ಎಸ್ಸೈ ಇರು ಹೊತ್ತಿಗೆ ಸ್ವಲ್ಪ ಒಂದ್ ಗಲಾಟೆಯಿಲ್ದೆ ಕಳೀತು. ಇಲ್ಲಾದ್ರೆ ಈ ಬಣ್ಣ ಹಾಕೂ ಹೆಸ್ರೇಲಿ ಏನ್ ಸ್ವಲ್ಪ ಪುಂಡಾಟ ಮಾಡ್ತಿದ್ರಾ? ಹೆಣ್ಮಕ್ಕಳಿಗಂತೂ ಬೇಕೂಂತ್ಲೇ ಹಿಂಸೆ ಕೊಡ್ತಿದ್ರು" ಇದು ಒಂದು ಉದಾಹರಣೆ ಮಾತ್ರ.

## ಎಸ್ಸೆಸ್ಸೆಲ್ಸಿ ಫಲಿತಾಂಶದಲ್ಲಿ ಜಿಲ್ಲೆಗೆ ಮೊದಲ ಸ್ಥಾನ ಪಡೆದ ಕಿಗ್ಗ ಪ್ರೌಢಶಾಲೆಯ ಅಧ್ಯಾಪಕ ವರ್ಗ ಮತ್ತು ಸಿಬ್ಬಂದಿಗಳಿಗೆ ಸನ್ಮಾನ

(ವರದಿ: ಹೆಚ್. ಎ. ಶ್ರೀನಿವಾಸ್)

ಕಿಗ್ಗ: ಜಿಲ್ಲೆಯ ಅತ್ಯಂತ ಮೂಲೆಯಲ್ಲಿದ್ದೂ ಇಲ್ಲಿನ ಪ್ರೌಢಶಾಲೆ ಈ ವರ್ಷದ ಎಸ್ಸೆಸ್ಸೆಲ್ಸಿ ಫಲಿತಾಂಶದಲ್ಲಿ ಜಿಲ್ಲೆಗೆ ಮೊದಲ ಸ್ಥಾನ ಪಡೆದಿರುವ ಸಂತೋಷದಲ್ಲಿ ಶಾಲಾ ಸಮಿತಿಯವರು ಜು. ೩೦ ರಂದು ಅಧ್ಯಾಪಕ ವರ್ಗ ಮತ್ತು ಸಿಬ್ಬಂದಿಗಳನ್ನು ಸನ್ಮಾನಿಸಿದರು.

ಶೃಂಗೇರಿ ತಹಶೀಲ್ದಾರ್ ಭಾಸ್ಕರರಾವ್ ಮತ್ತು ವಲಯ ಅರಣ್ಯಾಧಿಕಾರಿ ಸೂರ್ಯಪ್ರಕಾಶ್ ಸಮಾರಂಭದ ಮುಖ್ಯ ಅತಿಥಿಗಳಾಗಿದ್ದರು. ಶಾಲೆಯ ಅಭಿವೃದ್ಧಿಗೆ ತಮ್ಮಿಂದಾಗಬಹುದಾದ ಎಲ್ಲ ಸಹಕಾರದ ಭರವಸೆಯನ್ನು ತಹಶೀಲ್ದಾರ್ ನೀಡಿದರು. ಸೂರ್ಯಪ್ರಕಾಶ್ ಶಾಲೆಯ ಉತ್ತಮ ಫಲಿತಾಂಶಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು.

(ಮುಂದಿನ ಪುಟಕ್ಕೆ)

---

ಜಾಹೀರಾತಿಗೆ 'ಮುಂಜಾವು'

ಅತ್ಯುತ್ತಮ ಮಾಧ್ಯಮ

# ಪುಂಡಾಟಿಕೆ: ಕೊಪ್ಪದ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳ ಪ್ರತಿಕ್ರಿಯೆ

ಸ್ವಾಮಿ,

ನಿಮ್ಮ ಪತ್ರಿಕೆಯ ತಾ. ೮-೫-೮೩ರ ಸಂಚಿಕೆಯಲ್ಲಿ ಪ್ರಕಟವಾದ "ಪ್ರಥಮ ದರ್ಜೆಕಾಲೇಜಿಗೆ ಒಂದು ವರ್ಷ" ಎಂಬ ಲೇಖನದಲ್ಲಿ, "ಈ ಕಾಲೇಜಿನ ಹುಡುಗಿಯರಿಗೆ ಚುಡಾಯಿಸಿ ಹಿಂಸೆ ಕೊಡುತ್ತಾರೆ ಮತ್ತು ಕಾಲೇಜಿನ ಪಾಠದ ಸಮಯದಲ್ಲಿ ಗಲಾಟೆ ಮಾಡುತ್ತಾರೆ" ಎಂದು ಅನಾವಶ್ಯಕವಾಗಿ ಸತ್ಯಕ್ಕೆ ದೂರವಾಗಿರುವ ಸಂಗತಿಯನ್ನು ಪ್ರಕಟಿಸಿ ವಿದ್ಯಾರ್ಥಿಗಳ ಘನತೆಗೆ ಕುಂದು ತರಲು ಪ್ರಯತ್ನಿಸಿದ್ದೀರಿ. ತಾವು ಇನ್ನು ಮುಂದೆ ಇಂತಹ ವಿಚಾರಗಳನ್ನು ಪ್ರಕಟಿಸುವಾಗ ಕೂಲಂಕಷವಾಗಿ ವಿಮರ್ಶಿಸಿ ಪ್ರಕಟಿಸಬೇಕೆಂದು ಕೇಳಿಕೊಳ್ಳುತ್ತೇವೆ.

(ಈ ಪತ್ರವನ್ನು ವಿದ್ಯಾರ್ಥಿಗಳೂ ವಿದ್ಯಾರ್ಥಿನಿಯರೂ ಪ್ರತ್ಯೇಕವಾಗಿ ಸಹಿ ಮಾಡಿ ಕಳಿಸಿದ್ದಾರೆ.)

**ಸಂಪಾದಕನ ಟಿಪ್ಪಣಿ:**

ಈ ಕಾಲೇಜಿನ ಆರಂಭದ ದಿನಗಳಲ್ಲಿ ನಡೆದಿದ್ದ ಎರಡು ಘಟನೆಗಳು ಹಾಗೂ ಇಲ್ಲಿನವರೇ ಆದ ಕಾಲೇಜು ವಿದ್ಯಾರ್ಥಿಗಳ (ಈ ಪ್ರ.ದ. ಕಾಲೇಜಿನವರಲ್ಲದಿರಬಹುದು) ಕೆಲವು ವರ್ತನೆಗಳನ್ನು ಆಧರಿಸಿ ನನ್ನ ಅನಿಸಿಕೆಯನ್ನು ಹೀಗೆ ಬರೆದಿದ್ದೆ– "ಓದು, ಆಟ ಮತ್ತಿತರ ಚಟುವಟಿಕೆಗಳಲ್ಲಿ ಇಲ್ಲಿನ ಪ್ರತಿಭೆ ಇನ್ನೂ ಸರಿಯಾಗಿ ಪ್ರಕಟವಾಗಬೇಕಾಗಿದೆಯಾದರೂ ಹುಡುಗಿಯರಿಗೆ ಹಿಂಸೆ ಕೊಡುವುದು, ತರಗತಿಯಲ್ಲಿ ಗಲಾಟೆ ಮುಂತಾದ ವಿದ್ಯಾರ್ಥಿರಂಗದ ಕೊಳಕು ಅನಿಷ್ಟಗಳಲ್ಲಿ ಇಲ್ಲಿನ ಹುಡುಗರು ಈಗಾಗಲೇ ಸಾಕಷ್ಟು ಕುಖ್ಯಾತಿ ಗಳಿಸಿದ್ದಾರೆ. ಬಹು ಸಂಖ್ಯೆಯ 'ಒಳ್ಳೆಯ' ವಿದ್ಯಾರ್ಥಿಗಳು ಬೆರಳೆಣಿಕೆಯಷ್ಟಿರುವ ಈ 'ಕಳೆ'ಯನ್ನು ಹತೋಟಿಯಲ್ಲಿಡಬೇಕು......" ಆ ಎರಡು ಘಟನೆಗಳೆಂದರೆ, ಒಂದು- ತರಗತಿಯಲ್ಲಿ ನಡೆದಿದ್ದು, ಹಾಗೂ ಇನ್ನೊಂದು ಬಸ್ಸಿನಲ್ಲಿ ನಡೆಯಿತೆನ್ನಲಾದ ಪ್ರಕರಣ. ('ಮುಂಜಾವು': ೫-೧೨-೮೩)

ಈ ಸಂಬಂಧವಾಗಿ ವಿದ್ಯಾರ್ಥಿ ಮುಖಂಡರು ಬಂದು ಈ ಬರಹದಿಂದ ತಮಗೆಲ್ಲ ಬಹಳ ನೋವಾಗಿದೆಯೆಂದು ತಿಳಿಸಿದ್ದಾರೆ. ಮೇಲ್ಕಂಡ ಮೊದಲ ಘಟನೆ ಒಂದು ಸಣ್ಣ ತಮಾಷೆಯನ್ನು ತಪ್ಪಾಗಿ ಅರ್ಥ ಮಾಡಿಕೊಂಡಿದ್ದರ ಪರಿಣಾಮದಿಂದಾದದ್ದು ಹಾಗೂ ಅದು ಸೌಹಾರ್ದದಿಂದ ಕೊನೆಗೊಂಡಿತ್ತು; ಎರಡನೆಯದು ತಮ್ಮ ಕಾಲೇಜಿನ ವಿದ್ಯಾರ್ಥಿಗಳ ಪುಂಡಾಟಿಕೆಯಲ್ಲ ಎಂದು ಅವರು ಹೇಳಿದ್ದಾರೆ. ತಮ್ಮ ಕಾಲೇಜಿನಲ್ಲಿ ಪುಂಡರು ಇರಬಾರದೆಂದಲ್ಲ, ಆದರೆ ಈವರೆಗೆ ಇಂಥ ಘಟನೆ ನಡೆದಿಲ್ಲ; ಇದನ್ನು ಸ್ವತಃ ವಿದ್ಯಾರ್ಥಿನಿಯರೂ ಹೇಳುತ್ತಾರೆ– ಎನ್ನುತ್ತಾರೆ ಅವರು.

ವಿದ್ಯಾರ್ಥಿಗಳ ಹೇಳಿಕೆ ನಿಜವಿರಬಹುದು. ಹಾಗೆಂದೇ ನಂಬುತ್ತೇನೆ. ಆದರೆ ಒಂದು ಮಾತು—

ಚುಡಾಯಿಸುವುದು, ಪುಂಡಾಟಿಕೆ ಎಲ್ಲ ಒಂದು ಮಿತಿಯೊಳಗಿದ್ದರೆ ಯಾರೂ ಆಕ್ಷೇಪಿಸುವುದಿಲ್ಲ. ಆದರೆ ಈಚಿನ ವರ್ಷಗಳಲ್ಲಿ ಇವು ರಾಕ್ಷಸಾಕಾರ ತಾಳಿ, ಒಳ್ಳೊಳ್ಳೆಯ ವಿದ್ಯಾರ್ಥಿ-ವಿದ್ಯಾರ್ಥಿನಿಯರ ಜೀವ—ಜೀವನಗಳನ್ನೇ ಬಲಿ ತೆಗೆದುಕೊಳ್ಳುತ್ತಿವೆ. ಇಂಥದನ್ನು ನಾನು ತೀಕ್ಷ್ಣವಾಗಿ ವಿರೋಧಿಸುವವನು. ಆದ್ದರಿಂದಲೇ ಇಂಥ ಘಟನೆಗಳನ್ನು ಕಂಡರೆ ನಿರ್ದಾಕ್ಷಿಣ್ಯವಾಗಿಯೇ ಬರೆಯಬೇಕಾಗುತ್ತದೆ.

ನಮ್ಮ ಹುಡುಗರು ತಾವು ಸಾಕಷ್ಟು ಒಳ್ಳೆಯವರೆಂದಿದ್ದಾರೆ. ಅಷ್ಟಿದ್ದರೆ ಸಾಲದು. ಕೆಲವೇ ಕೆಲವು ಕೆಟ್ಟವರು ಎಲ್ಲಾ ಒಳ್ಳೆಯವರಿಗೆ ಕೆಟ್ಟ ಹೆಸರು ತರುವುದನ್ನು ಹದ್ದುಬಸ್ತಿನಲ್ಲಿಡುವ ಚೈತನ್ಯ ವಿದ್ಯಾರ್ಥಿ ಸಮೂಹದಲ್ಲಿ ಮೂಡಬೇಕು. ಈ ಕಾಲೇಜಿನಲ್ಲೂ, ಮುಂದೆಯೂ ತಮ್ಮ ಭವಿಷ್ಯ ಒಳ್ಳೆಯದು ಮಾಡಿಕೊಳ್ಳಲಿಕ್ಕಾಗಿ ವಿದ್ಯಾರ್ಥಿ—ವಿದ್ಯಾರ್ಥಿನಿಯರು ಶ್ರಮಿಸಲೆಂದು ನನ್ನ ಆಶಯ.

**—ಸಂಪಾದಕ.**

## ಕಾಡುಪ್ರಾಣಿಗಳ ಹಾವಳಿ: ೩೫ ಸಾವಿರ ರೂ. ಪರಿಹಾರ

(ವರದಿ: ಹುಮನಾ)

ಚಿಕ್ಕಮಗಳೂರು: ಕೊಪ್ಪ ಅರಣ್ಯ ವಿಭಾಗದಲ್ಲಿ ಈ ವರ್ಷದ ಜನವರಿಯಿಂದ ಮಾರ್ಚ್‌ವರೆಗಿನ ಅವಧಿಯಲ್ಲಿ ಕಾಡಾನೆ ಹಾವಳಿ ಬಗ್ಗೆ ೨೮ ಪ್ರಕರಣಗಳಲ್ಲಿ ೧೯,೯೦೦ ರೂ. ಗಳನ್ನೂ, ಹುಲಿಗೆ ತುತ್ತಾದ ಜಾನುವಾರುಗಳ ಬಾಬ್ತು ೩೭ ಪ್ರಕರಣಗಳಲ್ಲಿ ೧೭,೬೧೦ ರೂ. ಗಳನ್ನೂ ಪರಿಹಾರವಾಗಿ ನೀಡಲಾಗಿದೆಯೆಂದು ವಿಭಾಗ ಅರಣ್ಯಾಧಿಕಾರಿ ಕೆ. ಸುಂದರ್ ನಾಯ್ಕ್ ತಿಳಿಸಿ, ಅನಂತರವೂ ಹಲವಾರು ಪ್ರಕರಣಗಳ ಬಾಬ್ತು ಪರಿಹಾರ ಕೋರಿ ಬಂದ ರಿಕಾರ್ಡುಗಳ ವಿಲೇವಾರಿ ನಡೆಯುತ್ತಿದೆಯೆಂದಿದ್ದಾರೆ.

## ಶಾಲೆಯಲ್ಲಿ ಕುಡುಕ ಉಪಾಧ್ಯಾಯನ ಅಸಭ್ಯ ವರ್ತನೆ

(ವರದಿ: 'ಸುಧಾರಕ')

ಆಗಳಗಂಡಿ: ಇಲ್ಲಿ ವಾಸವಾಗಿರುವ ಭೈರೇದೇವರು ಶಾಲೆಯ ಉಪಾಧ್ಯಾಯ ಚಂದ್ರೇಗೌಡ ಎಂಬವರು ಇಲ್ಲಿನ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಕ್ಕಳೆದುರು ಅಸಭ್ಯವಾಗಿ ವರ್ತಿಸಿದ ಪ್ರಕರಣ ನಡೆದಿದೆ.

ಜು. ೧೮ರಂದು ಇಲ್ಲಿ ಸಾರಾಯಿ ಕುಡಿದು ಜಯಪುರಕ್ಕೆ ಹೋದ ಈತ ಶಾಲೆಗೆ ಹೋಗದೇ ಪುನಃ ಕಂಠಮಟ್ಟ ಕುಡಿದು ಇಲ್ಲಿಗೆ ಹಿಂದಿರುಗಿ ಬಂದು, ಮನೆಗೆ ಹೋಗದೇ ಸೀದಾ ಶಾಲೆಗೆ ಹೋದರೆನ್ನಲಾಗಿದೆ. ಅಲ್ಲಿ, ಅಂಗಿ ಕಳಚಿ, ಪ್ಯಾಂಟಿನ ಜಿಪ್ಸ್ ಬಿಚ್ಚುತ್ತಾ ಶಾಲೆಯ ಕಚೇರಿಯೊಳಗೆ ಹೋದಾಗ ಮುಖ್ಯೋಪಾಧ್ಯಾಯಿನಿಯಿಂದ ಕೋಲಾಟ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳ ತಯಾರಿ ಪಡೆಯುತ್ತಿದ್ದ ಮಕ್ಕಳು ಹೆದರಿ ಹೊರಗೆ ಓಡಿದರೆಂದೂ ಉಪಾಧ್ಯಾಯಿನಿ ಕಂಗಾಲಾಗಿ ಅಳುತ್ತಾ ಹೇಗೋ ತಪ್ಪಿಸಿಕೊಂಡು ಹೊರಗೆ ಬಂದರೆಂದೂ ಹೇಳಲಾಗಿದೆ.

ಈ ಪ್ರಕರಣ ಮತ್ತು ಇಂಥ ಇನ್ನೂ ಹಲವು ವರ್ತನೆಗಳು ಪೋಷಕರಲ್ಲಿ ಆತಂಕ ಮೂಡಿಸಿವೆ.

## ರೈತ ಸ್ವಾತಂತ್ರ್ಯ ಹೋರಾಟ ದಿನಾಚರಣೆ

ಆಗಳಗಂಡಿ: ರಾಜ್ಯ ರೈತಸಂಘದ ಇಲ್ಲಿನ ಪಂಚಾಯ್ತಿ ಘಟಕದ ಆಶ್ರಯದಲ್ಲಿ ಜು. ೨೧ ರಂದು ಮೇಲ್ಕಂಡ ದಿನಾಚರಣೆ ನಡೆಯಿತು. ಶ್ರೀಮತಿ ಅರೊನ್ಹಾ ರೈತ ಧ್ವಜಾರೋಹಣ ಮಾಡಿದರು. ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಸುಮಾರು ೧೭೫ ಮಂದಿ ರೈತಬಾಂಧವರಿಗೆ ವೈ. ಎಂ. ಉದಯ ರೈತ ಚಳುವಳಿಯ ಹುತಾತ್ಮರ ಹೆಸರಿನ ಪ್ರತಿಜ್ಞಾ ವಿಧಿಯನ್ನು ಬೋಧಿಸಿದರು. ಕಾರ್ಯದರ್ಶಿ ಆಲ್ವಿನ್ ನೊರೊನ್ಹಾ ಕಾರ್ಯಕ್ರಮದ ನೇತೃತ್ವ ವಹಿಸಿದ್ದರು.

## ಬಹಿರಂಗ ಹರಾಜು

ಕೊಪ್ಪ: ಇಲ್ಲಿನ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳ ಕಚೇರಿಯಲ್ಲಿ ಆಡಿಯೋ ವಿಶ್ಯುವಲ್ (ಸಿನಿ) ಯಂತ್ರವನ್ನು ೨-೮-೮೩ರಂದು ಬಹಿರಂಗವಾಗಿ ಹರಾಜು ಹಾಕಲಾಗುವುದೆಂದು ಕ್ಷೇತ್ರಾಭಿವೃದ್ಧಿ ಅಧಿಕಾರಿ ಕೆ. ಬಾಲಣ್ಣ ಗೌಡ ತಿಳಿಸಿದ್ದಾರೆ.

## ಸನ್ಮಾನ

(ಒಂದನೆಯ ಪುಟದಿಂದ)

ಅಧ್ಯಕ್ಷತೆ ವಹಿಸಿದ್ದ ಹರಿಹರಪುರ ಮಠಾಧೀಶರು, "ಉತ್ತಮವಾಗಿ ಕೆಲಸ ಮಾಡುವವರಿಗೆ ಸನ್ಮಾನಿಸುವುದು ಯೋಗ್ಯವಾದುದು" ಎಂದರು.

ಶಾಲಾ ಮುಖ್ಯೋಪಾಧ್ಯಾಯ ಹೆಚ್. ವೇದವ್ಯಾಸಾಚಾರ್, ಎ. ಎಚ್. ಸುಬ್ಬಣ್ಣ, ಕೆ. ಎಸ್. ಜೋಯ್ಸ್ ಸನ್ಮಾನಕ್ಕೆ ಉತ್ತರವಾಗಿ ಮಾತನಾಡಿದರು.

ಗ್ರಾಮಾಂತರದ ಈ ಶಾಲೆಗೆ ಒಂದು ವಿದ್ಯಾರ್ಥಿ ನಿಲಯ ಅಗತ್ಯವೆಂದು ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಎಂ. ಶ್ರೀನಿವಾಸಶೆಟ್ಟಿ ಹೇಳಿದರು.

ಶೃಂಗೇರಿ ಕಾಲೇಜಿನ ಪ್ರಿನ್ಸಿಪಾಲ್ ಎಂ. ಕೃಷ್ಣಪ್ಪಯ್ಯ ಹಾಗೂ ವಕೀಲ ಟಿ. ಎಚ್. ಕೃಷ್ಣಭಟ್ ಸಮಾರಂಭದಲ್ಲಿ ಹಾಜರಿದ್ದರು.

ಜಿ. ಪಿ. ಗಿರಿಯಪ್ಪಗೌಡ ಸ್ವಾಗತಿಸಿ, ಕೃಷ್ಣಭಟ್ ವಂದಿಸಿದರು.





ಸಂಪಾದಕ, ಮುದ್ರಕ ಮತ್ತು ಪ್ರಕಾಶಕ: ಸಿರಿಮನೆ ನಾಗರಾಜ್.
ಅಚ್ಚು: ದೀವಟಿಗೆ ಅಚ್ಚುಕೂಟ, ಕೊಪ್ಪ